# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ
## ಶಿವಾಜಿನಗರ ವಿಭಾಗ, ಶಿವಾಜಿನಗರ ಉಪ-ವಿಭಾಗ

ದಿನಾಂಕ: 06-02-2019 ಬೆಳಿಗ್ಗೆ 11.00 ಗಂಟೆಗೆ ಶ್ರೀಮತಿ ಮಮತ ಶರವಣ, ಪಾಲಿಕೆ ಸದಸ್ಯರು ಹಾಗೂ ಅಧ್ಯಕ್ಷರು, ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ: 90 ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು :-

ಉಪಸ್ಥಿತರಿದ್ದ, ವಾರ್ಡ್ ಕಮಿಟಿ ಸದಸ್ಯರುಗಳು:-

| ಕ್ರ.ಸಂ | ಹೆಸರು | ಹುದ್ದೆ. |
|---|---|---|
| 1. | ಶ್ರೀಮತಿ ಮಮತ ಶರವಣ | ಅಧ್ಯಕ್ಷರು |
| 2. | ಶ್ರೀ ಧನರಾಜ್ | ಸದಸ್ಯರು |
| 3. | ಶ್ರೀ ಪರ್ಥಿಬನ್ | ಸದಸ್ಯರು |
| 4. | ಶ್ರೀಮತಿ ಶೀಲಾ | ಸದಸ್ಯರು |
| 5. | ಶ್ರೀಮತಿ ಈಶ್ವರಿ | ಸದಸ್ಯರು |
| 6. | ಶ್ರೀಮತಿ ಮಾಲತಿ | ಸದಸ್ಯರು |
| 7. | ಶ್ರೀ ಕೃಷ್ಣ | ಸದಸ್ಯರು |
| 8. | ಶ್ರೀ ಹರಿಕೃಷ್ಣ | ಸದಸ್ಯರು |
| 9. | ಶ್ರೀ ಪ್ರಕಾಶ್ | ಸದಸ್ಯರು |
| 10. | ಶ್ರೀ ಶಶಿಕಿರಣ್ | ಸದಸ್ಯರು |

ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿ ರವರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ. |
|---|---|---|
| 1 | ಶ್ರೀ ಕೆ. ಶಿವಕುಮಾರ್ | ಸಹಾಯಕ ಕಂದಾಯ ಅಧಿಕಾರಿ (ಶಿವಾಜಿನಗರ) ಹಾಗೂ ಕಾರ್ಯದರ್ಶಿಗಳು, ವಾರ್ಡ್ ಸಂಖ್ಯೆ: 90ರ ಉಪ-ವಿಭಾಗ |
| 2 | ಶ್ರೀ ಕೆ. ಆನಂದ್ ಕುಮಾರ್ | ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 90 |
| 3 | ಶ್ರೀ ಸುಬ್ಬರಾಯುಡು | ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ: 90 |
| 4 | ಶ್ರೀ ನರಸಿಂಹಮೂರ್ತಿ | ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ: 90 |
| 5 | ಶ್ರೀ ಪ್ರವೀಣ್ ಎನ್.ಎಂ | ಸಹಾಯಕ ಅಭಿಯಂತರರು (ಶಿವಾಜಿನಗರ) ವಿಭಾಗ |
| 6 | ಶ್ರೀ ಕೆ. ನಾಗರಾಜ್ | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) ವಿಭಾಗ |
| 7 | ಶ್ರೀ ಸಂದೀಪ್ ಸಿಂಗ್ | ಸಹಾಯಕ ಅಭಿಯಂತರರು (ವಿದ್ಯುತ್-ಪೂರ್ವ) ವಿಭಾಗ |
| 8 | ಶ್ರೀಮತಿ ಭೂದೇವಿ | ತೋಟಗಾರಿಕೆ ಪರಿವೀಕ್ಷಕರು (ತೋಟಗಾರಿಕೆ) ವಿಭಾಗ, ಬಿಬಿಎಂಪಿ |

ಸಹಾಯಕ ಕಂದಾಯ ಅಧಿಕಾರಿ (ಶಿವಾಜಿನಗರ) ಹಾಗೂ ಕಾರ್ಯದರ್ಶಿಗಳು, ವಾರ್ಡ್ ಸಂಖ್ಯೆ: 90 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಹಾಗೂ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ವಾರ್ಡ್ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ತಿಳಿಸಲು ಸೂಚಿಸಿದರು. ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ವಿಷಯಗಳ ಈ ಕೆಳಗಿನ ಅಂಶಗಳ ಬಗ್ಗೆ ಚರ್ಚಿಸಲಾಯಿತು.

- ಎಂ.ಜಿ.ರಸ್ತೆಯಲ್ಲಿ ಬೀದಿ ವ್ಯಾಪಾರಿಗಳ ಹಾವಳಿ ಜಾಸ್ತಿಯಾಗಿದ್ದು, ಅದರಿಂದ ಪಾದಚಾರಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದು, ಅವರನ್ನು ನಿಯಂತ್ರಿಸಲು ಹಾಗೂ ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ಸೂಚಿಸಿದ ಮೇರೆಗೆ ರಸ್ತೆ ಬದಿಯ ವ್ಯಾಪಾರಿಗಳನ್ನು ತೆರವುಗೊಳಿಸಲಾಗಿರುತ್ತದೆ ಎಂದು ಸಹಾಯಕ ಅಭಿಯಂತರರು (ವಾರ್ಡ್ ಸಂಖ್ಯೆ: 90) ರವರು ತಿಳಿಸಿದರು.

--2ನೇ ಪುಟಕ್ಕೆ

- ಶ್ರೀ ಹಲಸೂರು ಸೋಮೇಶ್ವರ ದೇವಸ್ಥಾನದ ಬೀದಿ ರಥ ಸಾಗುವ ಬೀದಿಗಳನ್ನು ಸಂಪೂರ್ಣವಾಗಿ ಸುಸಜ್ಜಿತ ಹಾಗು ಶುಚಿತ್ವವಾಗಿ ನಿರ್ವಹಿಸಲು ಹಿಂದಿನ ಸಭೆಯಲ್ಲಿ ಸೂಚಿಸಿದ ಮೇರೆಗೆ ಮಾದರಿ ರಸ್ತೆ ನಿರ್ಮಾಣ ಮಾಡಲು ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗುವುದೆಂದು ಸಹಾಯಕ ಅಭಿಯಂತರರು (ವಾರ್ಡ್ ಸಂಖ್ಯೆ: 90) ರವರು ತಿಳಿಸಿದರು.

- ಪಳನಿ ಮೊದಲಿಯಾರ್ ಬೀದಿ ರಥ ಬೀದಿಯಾಗಿದ್ದು, ಮಾಂಸದ ಅಂಗಡಿಯನ್ನು ಸದರಿ ಬೀದಿಯಲ್ಲಿ ಅಳವಡಿಸಿರುವುದರಿಂದ, ಪೂರಾತನ ಕಾಲದಿಂದ ಈ ಬೀದಿಯು ರಥ ಬೀದಿಯಾಗಿದ್ದು, ಸದರಿ ಬೀದಿಯಲ್ಲಿರುವ ಮಾಂಸದ ಅಂಗಡಿಯನ್ನು ತಕ್ಷಣ ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ಸೂಚಿಸಿದ್ದ ಮೇರೆಗೆ ಈಗಾಗಲೇ ಎರಡು ಮಾಂಸದ ಅಂಗಡಿಗಳನ್ನು ತೆರವುಗೊಳಿಸಿದ್ದು, ಉಳಿದ ಒಂದು ಅಂಗಡಿಯನ್ನು ಶೀಘ್ರದಲ್ಲಿಯೇ ತೆರವುಗೊಳಿಸಲಾಗುವುದೆಂದು ಸಹಾಯಕ ಅಭಿಯಂತರರು (ವಾರ್ಡ್ ಸಂಖ್ಯೆ: 90) ರವರು ತಿಳಿಸಿದರು.

- ಶಿವಾಜಿನಗರ ವಲಯಕ್ಕೆ ಸಂಬಂಧಿಸಿದಂತೆ, ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ) ರವರು ಅಂಗವಿಕಲರಾಗಿದ್ದು, ಶಿವಾಜಿನಗರ ವಲಯದಲ್ಲಿ ಘನತ್ಯಾಜ್ಯ ವಸ್ತುಗಳ ಉತ್ಪತ್ತಿ ಎಚ್ಚಾಗಿರುವುದರಿಂದ, ಸಮರ್ಪಕವಾಗಿ ಸದರಿಯವರಿಂದ ಕಾರ್ಯ ನಿರ್ವಹಿಸಲು ಸಾಧ್ಯವಾಗದೇ ಇರುವುದರಿಂದ ಸದರಿಯವರ ಬದಲಿಗೆ ನಿಪುಣ ದಕ್ಷ ಅಧಿಕಾರಿಯನ್ನು ನಿಯೋಜಿಸಲು ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರಿಗೆ ವರದಿ ಮಂಡಿಸಲು ಸೂಚಿಸಿದ ಮೇರೆಗೆ ಸದರಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ) ರವರನ್ನು ವರ್ಗಾವಣೆ ಮಾಡಿ ಅವರ ಸ್ಥಳಕ್ಕೆ ಬೇರೆಯವರನ್ನು ನಿಯೋಜಿಸಲಾಗಿರುತ್ತದೆ ಎಂದು ತಿಳಿಸಿದರು.

- ಕಸದ ಲಾರಿ ದುರಸ್ಥಿಯಲ್ಲಿರುವುದರಿಂದ, ಬೇರೆ ಕಸದ ಲಾರಿ ವ್ಯವಸ್ಥೆ ಮಾಡಲು ಸೂಚಿಸಿದರು.

- ಹಲಸೂರು ಕೆರೆ, ಹಲಸೂರು ಮಾರ್ಕೆಟ್, ಸತ್ಯನಾರಾಯಣ ಟೆಂಪಲ್ ಸ್ಟ್ರೀಟ್, ಬಜಾರ್ ಸ್ಟ್ರೀಟ್, ಸೋಮೇಶ್ವರ ದೇವಸ್ಥಾನದ ಬೀದಿ, ಹಳೇ ತೇರು ಬೀದಿ, ಗುಪ್ತಾ ಲೇಔಟ್, ಹಲಸೂರು ರಸ್ತೆಗಳಲ್ಲಿ ರಾತ್ರಿ ವೇಳೆಯಲ್ಲಿಯೇ ಕಸವನ್ನು ತೆಗೆದು ಹಾಕುವಂತೆ ಸೂಚಿಸಿದರು.

- ವಾರ್ಡ್ ಸಂಖ್ಯೆ: 90ರಲ್ಲಿ ಶೌಚಾಲಯಗಳ ವಿವರ ನೀಡಲು ಕೋರಿದ್ದಾಗ ಎಂ.ವಿ.ಗಾರ್ಡನ್, ಬಜಾರ್ ಸ್ಟ್ರೀಟ್, ಗುರುದ್ವಾರ ಮುಂದೆ, ಶ್ರೀ ಸರ್ಕಲ್ ಮುಂದೆ, ಹಲಸೂರು ಕೆರೆ ಆವರಣ, ಹಳೇ ಮದ್ರಾಸ್ ರಸ್ತೆಯಲ್ಲಿ ಶೌಚಾಲಯ ನಿರ್ಮಿಸಲು ಸೂಚಿಸಿದರು.

- ಪೊಲೀಸ್ ಕ್ವಾಟ್ರಸ್ ಆವರಣದಲ್ಲಿ ಖಾಲಿ ಜಾಗವಿದ್ದು, ಅದು ಬಹಳ ವರ್ಷಗಳಿಂದ ಖಾಲಿ ಇದ್ದು, ಅದನ್ನು ಉದ್ಯಾನವನವಾಗಿ ಪರಿವರ್ತಿಸಲು ಸೂಚಿಸಿದರು.

- ರಾಮಕೃಷ್ಣಮಠ ರಸ್ತೆ ಮತ್ತು ದೊಡ್ಡಕಾಟಪ್ಪ ರಸ್ತೆಗಳಲ್ಲಿಯೇ ಅನಧಿಕೃತವಾಗಿ ವಾಹನಗಳನ್ನು ನಿಲ್ಲುಸುತ್ತಿದ್ದು, ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿದ್ದು, ಸಂಚಾರಿ ಪೊಲೀಸ್ ಠಾಣೆಗೆ ದೂರು ನೀಡಿ ತೆರವುಗೊಳಿಸಲು ಅವುಗಳನ್ನು ಸೂಚಿಸಿದರು.

- ಪೌರಕಾರ್ಮಿಕರಿಗೆ ಮಾಸ್ಕ್, ಗ್ಲಾಸ್, ಶೂಸ್‌ಗಳನ್ನು ಒದಗಿಸಲು ಸೂಚಿಸಿದರು ಹಾಗೂ ಪೌರಕಾರ್ಮಿಕರಿಗೆ ಕಸ ತೆಗೆಯುವ ಗಾಡಿಗಳನ್ನು ಹೊಸದಾಗಿ ವಿತರಿಸಲು ಸೂಚಿಸಿದರು.

- ಎಂ.ವಿ.ಗಾರ್ಡನ್‌ನಲ್ಲಿ RO Water ಪ್ಲಾಂಟ್ ಅಳವಡಿಸಲು ಸೂಚಿಸಿದರು.

- ನಾಲಾ ರಸ್ತೆಯಲ್ಲಿ ಮಳೆ ನೀರಿನ ಚರಂಡಿ ಮೇಲೆ ಮೂರು ಮೇಲು ಸೇತುವೆ ನಿರ್ಮಾಣವನ್ನು ಮಾಡುತ್ತಿದ್ದು, ತುರ್ತಾಗಿ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಸೂಚಿಸಿದರು. ಕಂಟ್ರಾಕ್ಟರ್ ಚನ್ನಕೇಶವ ರವರು ಸಮರ್ಪಕವಾಗಿ ಮೇಲ್ಕಂಡ ಕಾರ್ಯ ನಿರ್ವಹಿಸದೇ ಇರುವುದರಿಂದ, ಇವರ ವಿರುದ್ಧ ಕ್ರಮವಹಿಸಲು ಸೂಚಿಸಿದರು.

- ಹಲಸೂರು ಲೇಕ್ ಆವರಣದಲ್ಲಿರುವ ಸ್ವಿಮ್ಮಿಂಗ್ ಪೂಲ್‌ಗೆ ನಾಮಫಲಕವನ್ನು ಅಳವಡಿಸಲು ಸೂಚಿಸಿದರು.

- ನಾಲಾ ರಸ್ತೆಯಲ್ಲಿ ಮಳೆ ನೀರಿನ ಚರಂಡಿಗೆ ಮೆಸ್ ಅಳವಡಿಸದೆ ಇರುವುದರಿಂದ, ಸಾರ್ವಜನಿಕರು ಮಳೆ ನೀರಿನ ಚರಂಡಿಗೆ ಮೆಸ್ ಅಳವಡಿಸದೆ ಇರುವುದರಿಂದ, ಸಾರ್ವಜನಿಕರು ಮಳೆ ನೀರಿನ ಚರಂಡಿಗೆ ಕಸ ಹಾಕುತ್ತಿರುವುದರಿಂದ, ಮೆಸ್ ಅಳವಡಿಸಲು ಕ್ರಮವಹಿಸಲು ಸೂಚಿಸಿದರು.

--3ನೇ ಪುಟಕ್ಕೆ

- ಅಣ್ಣಯ್ಯರೆಡ್ಡಿ ರಸ್ತೆಯಲ್ಲಿ 2 ವರ್ಷಗಳಿಂದ ಮನೆ ಖಾಲಿ ಇದ್ದು, ಇಲ್ಲಿ ಸ್ವಚ್ಛತೆ ಕಾಪಾಡಲು ಕ್ರಮವಹಿಸಲು ಸೂಚಿಸಿದರು.
- ಎಂ.ವಿ.ಗಾರ್ಡನ್‌ನ ಸಮುದಾಯ ಭವನದ ಕೀಯನ್ನು ಪಡೆದು ಸಮುದಾಯ ಭವನವನ್ನು ಪಾಲಿಕೆ ವಶದಲ್ಲಿಟ್ಟುಕೊಳ್ಳಲು ಸೂಚಿಸಿದರು.
- ವಾರ್ಡ್‌ಗೆ ALO ಗ್ಯಾಂಗ್‌ಮೆನ್‌ಗಳನ್ನು ನಿಯೋಜಿಸಲು ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ)**

- ಗುಪ್ತ ಲೇಔಟ್ 2ನೇ ಕ್ರಾಸ್‌ನಲ್ಲಿ ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬ ತೆರವುಗೊಳಿಸಲು ಸೂಚಿಸಿದರು.

**ಕ್ರಮ: ಕಾರ್ಯಪಾಲಕ ಅಭಿಯಂತರರು(ವಿದ್ಯುತ್-ಪೂರ್ವ)**

ಈ ಸಭೆಯಲ್ಲಿ ಚರ್ಚಿಸಲಾದ ಮೇಲ್ಕಂಡ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟ ಅಧಿಕಾರಿ ನೌಕರರು ತೆಗೆದುಕೊಂಡ ಸೂಕ್ತ ಕ್ರಮ ಹಾಗೂ ಕಾರ್ಯರೂಪಕ್ಕೆ ತಂದಿರುವ ಬಗ್ಗೆ ವರದಿಯನ್ನು ನೀಡಲು ಸೂಚಿಸಿ ಹಾಗೂ ಡಿಸೆಂಬರ್-2018ರ ಮಾಹೆಯ ಸಮಿತಿಯಲ್ಲಿ ಚರ್ಚಿಸಿದಂತಹ ಸಮಸ್ಯೆಗಳ ಬಗ್ಗೆ ತೆಗೆದುಕೊಂಡ ಕ್ರಮದ ವರದಿಯೊಂದಿಗೆ ಮುಂದಿನ ವಾರ್ಡ್ ಸಮಿತಿಗೆ ಹಾಜರಾಗಲು ಮಾನ್ಯ ಅಧ್ಯಕ್ಷರು ರವರು ಸೂಚಿಸಿದರು ಹಾಗೂ ಕಾರ್ಯದರ್ಶಿಯವರು ಸಭೆಗೆ ಹಾಜರಾದ ಎಲ್ಲರಿಗೂ ವಂದನಾರ್ಪಣೆಗಳನ್ನು ತಿಳಿಸುತ್ತಾ, ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಮಮತಾ ಶರವಣ)**
ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ಮಾನ್ಯ ನಗರ ಪಾಲಿಕೆ ಸದಸ್ಯರು,
ವಾರ್ಡ್ ಸಂಖ್ಯೆ: 90, ಹಲಸೂರು

<u>ಪ್ರತಿಯನ್ನು:</u>

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2. ಮಾನ್ಯ ಉಪ ಮಹಾಪೌರರ ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಲಾಗಿದೆ.
3. ಮಾನ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಲಾಗಿದೆ.
4. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
5. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ.
6. ಜಂಟಿ ಆಯುಕ್ತರು (ಆರೋಗ್ಯ) ರವರ ಅವಗಾಹನೆಗೆ ಕಳುಹಿಸಲಾಗಿದೆ.
7. ಉಪ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಕಳುಹಿಸಲಾಗಿದೆ.
8. ಸಮಿತಿಯ ಎಲ್ಲಾ ಸದಸ್ಯರ ಅವಗಾಹನೆಗೆ ಕಳುಹಿಸಲಾಗಿದೆ.
9. ಕಾರ್ಯದರ್ಶಿ ಮತ್ತು ಸಂಚಾಲರು, ವಾರ್ಡ್ ಸಂಖ್ಯೆ: 90 ರವರ ಅವಗಾಹನೆಗಾಗಿ ಕಳುಹಿಸಿದೆ.
10. ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿ/ನೌಕರರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.